ದಿ: 05-08-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಶ್ರೀ ಎನ್.ಜಿ. ವಕೀಲರಿಂದ :-

1. ನಿ.ಪಿ.-76-ರಿಂದ 92 ರ ಆಸ್ತಿಗಳಿಗೆ ಸಂಬಂಧಿಸಿದ ರಿ.ಸ.ನಂ. ಮತ್ತು ವಿಸ್ತೀರ್ಣ ನನಗೆ ಹೇಳಲು ಆಗುವುದಿಲ್ಲ. ನಿಪಿ-76 ರಿಂದ 92 ರ ಪಹಣಿಗಳಲ್ಲಿ ಬೋಗಪ್ಪ ಎಂದು ಹೆಸರು ನಮೂದಾಗಿರುವ ಕಾರಣ ಅವುಗಳನ್ನು ಹಾಜರುಪಡಿಸಿರುತ್ತೇನೆ ಅಂದರೆ ಸರಿ. ಬೋಗಪ್ಪ ಎನ್ನುವ ಹೆಸರಿನವರು ನಮ್ಮ ತಂದೆಯನ್ನು ಬಿಟ್ಟು ಬೇರೆಯವರು ಇರುತ್ತಾರೆ. ನಿಪಿ-76, 80, 81, 82, 83, 85 ಮತ್ತು 91 ರ ಪಹಣಿಗಳು ದಾವಾ ಸ್ವತ್ತುಗಳಿಗೆ ಸಂಬಂಧಿಸಿದ್ದಲ್ಲ ಅಂದರೆ ಸರಿಯಲ್ಲ. ನಿಪಿ-77 ರ ಸ್ವತ್ತು ಕಟುತ್ತ ಕೆಂಚಪ್ಪ ಮತ್ತು ಮಲ್ಲಣ್ಣನವರಿಗೆ ಸಂಬಂಧಿಸಿರುತ್ತದೆ ಅಂದರೆ ಸರಿಯಲ್ಲ. ಸದರಿಯವರು ನಿಪಿ-77 ರ ಸ್ವತ್ತನ್ನು ಅನುಭವಿಸುತ್ತಿದ್ದಾರೆ ಅಂದರೆ ಸಾಕ್ಷಿಯು ಅನುಭವಿಸುತ್ತಿರಬಹುದು, ಆದರೆ ಅದು ನಮ್ಮ ಕುಟುಂಬಕ್ಕೆ ಸೇರಿರುತ್ತದೆ ಅಂತ ನುಡಿಯುತ್ತಾರೆ. ನಿಪಿ-78 ರಲ್ಲಿ ನಮೂದಿಸಿರುವ ರಂಗಣ್ಣ ಬಿನ್ ಅಸಾದಿ ಕರಿಯಣ್ಣ ಪರಿಶಿಷ್ಟ ಜಾತಿಗೆ ಸೇರಿದವರು ಅಂದರೆ ಸರಿ. ಸದರಿ ಜಮೀನನ್ನು ರಂಗಣ್ಣನವರು ಅನುಭವಿಸುತ್ತಿದ್ದಾರೆ ಅಂದರೆ ಸರಿಯಲ್ಲ. ಹನುಮಯ್ಯ ಬಿನ್ ಅಸಾದಿ ಕರಿಯಣ್ಣ ಪರಿಶಿಷ್ಟ ಜಾತಿಗೆ ಸೇರಿದವರು ಅಂದರೆ ಸರಿ. ನಿಪಿ-79 ರ ಆಸ್ತಿಯನ್ನು ಸದರಿ ಹನುಮಯ್ಯಬಿನ್ ಅಸಾದಿ ಕರಿಯಣ್ಣ ಅನುಭವಿಸುತ್ತಿದ್ದಾರೆ ಅಂದರೆ ಸರಿಯಲ್ಲ.

2. ನಾವು ಕುರುಬ ಜನಾಂಗಕ್ಕೆ ಸೇರಿರುತ್ತೇವೆ. ನಿಪಿ-84 ರ ಸ್ವತ್ತು ಮೂಲತಃ ಸಿದ್ದಜ್ಜಿಗೆ ಸೇರಿರುತ್ತದೆ ಅಂದರೆ ಸರಿ. ಸದರಿ ಸ್ವತ್ತಿನ ಪೈಕಿ 2 ಎಕರೆ 10 ಗುಂಟೆ ಜೇಷ್ಟ ತಿಮ್ಮಣ್ಣನಿಗೆ 2 ಎಕರೆ 20 ಗುಂಟೆ ನಮ್ಮ ತಂದೆಗೆ. 2 ಎಕರೆ 10 ಗುಂಟೆ ಹನುಮಂತಪ್ಪನಿಗೆ, 3 ಎಕರೆ 9 ಗುಂಟೆ ಸಣ್ಣ ತಿಮ್ಮಪ್ಪನಿಗೆ ಬಂದಿರುತ್ತದೆ ಅಂದರೆ ಸರಿ. ಸದರಿ ಸ್ವತ್ತುಗಳು ನಿಪಿ-15 ರಿಂದ 20 ರ ದಾಖಲೆಗಳ ಸ್ವತ್ತಾಗಿರುತ್ತವೆ ಅಂದರೆ ಸರಿ. ನಿಪಿ-85 ಮತ್ತು 86 ರ ದಾಖಲೆಗಳು ಐಟಂ ನಂ.66 ರ ಸ್ವತ್ತಿಗೆ ಸಂಬಂಧಿಸಿರುತ್ತವೆ ಅಂದರೆ ಸರಿ. ಸಿದ್ದಜ್ಜಿರವರ ಗಂಡನ ಹೆಸರು ಬಂಡಿ ತಿಮ್ಮಣ್ಣ ಅಂದರೆ ಸಾಕ್ಷಿ ಬಡ್ಡಿ ತಿಮ್ಮಪ್ಪ ಎಂದು ನುಡಿಯುತ್ತಾರೆ. ಸದರಿ ಬಡ್ಡಿ ಸಿದ್ದಜ್ಜಿಗೆ ಬೋಗಪ್ಪ ಎನ್ನುವ ಸಾಕುಮಗ ಇದ್ದರು ಅಂದರೆ ಸರಿ. ನಿಪಿ-87 ರ ಸ್ವತ್ತು ಸದರಿ ಬೋಗಪ್ಪನಿಗೆ ಸೇರಿರುತ್ತದೆ ಅಂದರೆ ಸರಿಯಲ್ಲ, ಸಾಕ್ಷಿ ನಮ್ಮ ತಂದೆಗೆ ಸೇರಿರುತ್ತದೆ ಅಂತ ನುಡಿಯುತ್ತಾರೆ. ನಿಪಿ-88 ರ ಸ್ವತ್ತನ್ನು ಅರಿಶಿನ-ಕುಂಕುಮಕ್ಕಾಗಿ ನನಗೆ ಕೊಡಲಾಗಿದೆ ಅಂದರೆ ಸರಿಯಲ್ಲ. ಸದರಿ ಸ್ವತ್ತನ್ನು ನಾನು ಅಭವಿಸುತ್ತಿದ್ದೇನೆ ಅಂದರೆ ಸರಿ. ಸದರಿ ಸ್ವತ್ತು ವಿಲ್ ನ ಮೂಲಕ ಬಂದು ಅನುಭವಿಸುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-89 ರ ಸ್ವತ್ತು ಎಂ.ಜಿ.ದಿಬ್ಬದವರಿಗೆ ಸೇರಿದ ಸ್ವತ್ತು ಅಂದರೆ ಸರಿಯಲ್ಲ. ನಿಪಿ-89 ರ ರಾಮಪ್ಪ ಬಿನ್ ಚಿಕ್ಕಪ್ಪ ಎಂ.ಜಿ.ದಿಬ್ಬದ ಗ್ರಾಮದವರು ಅಂದರೆ ನನಗೆ ಗೊತ್ತಿಲ್ಲ. ಎಂ.ಜಿ.ದಿಬ್ಬದ ಯಾರು ಅನುಭವಿಸುತ್ತಿದ್ದಾರೆ ಅಂತ ನನಗ ಗೊತ್ತಿಲ್ಲ.

3. ನಿಪಿ-90 ರ ಸ್ವತ್ತನ್ನು 2 ನೇ ವಾದಿಗೆ ಅರಿಶಿನ-ಕುಂಕುಮಕ್ಕೆ ಕೊಡಲಾಗಿತ್ತು ಅಂದರೆ ಸರಿಯಲ್ಲ. ಅರಿಶಿನ ಕುಂಕುಮಕ್ಕೆ ಕೊಟ್ಟಿದ್ದ ಸದರಿ ಸ್ವತ್ತನ್ನು 2 ನೇ ವಾದಿಯು 2 ನೇ ಪ್ರತಿವಾದಿ ಸಣ್ಣತಿಮ್ಮಪ್ಪನಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ನಿಪಿ-90 ರ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಅಂದರೆ ಸರಿ. ನಿಪಿ-92 ರ ಸ್ವತ್ತನ್ನು ಈಗಾಗಲೇ ಐಟಂ ನಂ.44 ರ ಸ್ವತ್ತನ್ನಾಗಿ ಷೆಡ್ಯೂಲ್ ನಲ್ಲಿ ಸೇರಿಸಲಾಗಿದೆ ಅಂದರೆ ಸರಿ. ಸದರಿ ಸ್ವತ್ತು ಎ.ಕೆ.ರಂಗಪ್ಪನವರ ಸ್ವಾಧೀನದಲ್ಲಿದೆ ಅಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ